# ಸೊನಾಲಿಯ ಸಮರ

'ಈ ಪರಿಸ್ಥಿತಿಯನ್ನು ನಿಭಾಯಿಸಲು, ಕ್ಷಿಪ್ರ ಮತ್ತು ತಕ್ಷಣದ ಕ್ರಮ ಕೈಗೊಳ್ಳುವುದರ ಹೊರತು ಬೇರೆ ಉತ್ತಮ ದಾರಿ ಇಲ್ಲ. ಹಾಗಾಗಿ ನನ್ನ ವೈದ್ಯರು ಸೂಚಿಸಿದ ಪ್ರಕಾರ, ಸದ್ಯಕ್ಕೆ ನ್ಯೂಯಾರ್ಕ್‌ನಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. ನಾವೆಲ್ಲ ಆಶಾವಾದಿಗಳಾಗಿದ್ದೇವೆ. ಈ ದಾರಿಯಲ್ಲಿ ಪ್ರತಿಯೊಂದು ಹೆಜ್ಜೆಯಲ್ಲೂ ಹೋರಾಟ ಮಾಡಲು ನಾನು ದೃಢನಿಶ್ಚಯ ಮಾಡಿದ್ದೇನೆ. ಕಳೆದ ಕೆಲವು ದಿನಗಳಿಂದ ಎಲ್ಲೆಡೆಯಿಂದ ನನಗೆ ಸಿಗುತ್ತಿರುವ ಪ್ರೀತಿ ಮತ್ತು ಬೆಂಬಲ ತುಂಬಾ ಸಹಾಯ ಮಾಡಿದೆ. ಅದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ. ನನ್ನ ಕುಟುಂಬದ ಮತ್ತು ಸ್ನೇಹಿತರ ಬೆಂಬಲ ಬೆನ್ನಿಗಿರುವುದರಿಂದ ಈ ಸಮರವನ್ನು ನಾನು ಮುಖಾಮುಖಿ ಎದುರಿಸುತ್ತೇನೆ.'

– ಇದು ಸೊನಾಲಿ ಬೇಂದ್ರೆ ಮಾಡಿರುವ ಟ್ವೀಟ್‌ನ ಅನುವಾದ. ಬಾಲಿವುಡ್‌ನ ಸುಂದರ ಹಾಗೂ ಪ್ರತಿಭಾವಂತ ನಟಿ ಸೊನಾಲಿ ಬೇಂದ್ರೆಗೆ ಕ್ಯಾನ್ಸರ್ ಎಂಬ ಸುದ್ದಿ ಕಳೆದ ವಾರ ಬರಸಿಡಿಲಿನಂತೆ ಬಂದದ್ದು, ಬಾಲಿವುಡ್‌ನ ಹಲವಾರು ನಟ, ನಟಿಯರಲ್ಲಿ ದಿಗ್ಭ್ರಮೆ ಮೂಡಿಸಿದೆ. ನ್ಯೂಯಾರ್ಕ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೊನಾಲಿ, ಧೃತಿಗೆಡದೆ ಎಲ್ಲವನ್ನೂ ಎದುರಿಸಲು ಮಾನಸಿಕವಾಗಿ ಸಿದ್ಧಳಾಗಿದ್ದಾಳೆ.

ಸೆಲೆಬ್ರಿಟಿಗಳಿಗೆ ಇಂತಹ ದೊಡ್ಡ ಕಾಯಿಲೆಗಳು ಬಂದಾಗ ಅದೊಂದು ದೊಡ್ಡ ಸುದ್ದಿಯಾಗುತ್ತದೆ. ಕೆಲವೇ ತಿಂಗಳ ಹಿಂದೆ ಬಾಲಿವುಡ್‌ನ ಇನ್ನೊಬ್ಬ ಪ್ರತಿಭಾವಂತ ನಟ ಇರ್ಫಾನ್ ಖಾನ್ ಕೂಡಾ ಹೀಗೆಯೇ ಹಠಾತ್ ಸುದ್ದಿ ಕೊಟ್ಟಿದ್ದ. ಆತನೂ ಈಗ ನ್ಯೂಯಾರ್ಕ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಆದರೆ ಭಾರತದಲ್ಲಿ ಇವತ್ತು ಕ್ಯಾನ್ಸರ್ ಅಪರೂಪದ ಕಾಯಿಲೆ ಏನಲ್ಲ. ದೇಶದಲ್ಲಿ ಸುಮಾರು 25 ಲಕ್ಷ ಜನ ಕ್ಯಾನ್ಸರ್ ಜತೆ ಬದುಕುತ್ತಿದ್ದಾರೆ. ಹಾಗೆಯೇ ಪ್ರತಿ ವರ್ಷ 7 ಲಕ್ಷ ಹೊಸ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ದೇಶದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಇದು ಕಡಿಮೆಯೇ ಇರಬಹುದು. ಆದರೆ ದೇಶದಾದ್ಯಂತ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ನಟ–ನಟಿಯರಿಗೆ ಈ ಕಾಯಿಲೆ ಬಂದಾಗ ಇದರ ಕುರಿತು ಹೆಚ್ಚು ಚರ್ಚೆ ನಡೆಯುತ್ತದೆ, ಎಚ್ಚರ ಸೃಷ್ಟಿಯಾಗುತ್ತದೆ. ಅದರಲ್ಲೂ ಸೊನಾಲಿಯಂತಹ ಸೆಲೆಬ್ರಿಟಿಗಳು ಈ ಕಾಯಿಲೆಯನ್ನು ಧೈರ್ಯದಿಂದ ಎದುರಿಸುವುದಾಗಿ ಹೇಳಿಕೆಗಳನ್ನು ಕೊಟ್ಟಾಗ ಅದು ಸಮಾಜದ ಮೇಲೆ ಬೀರುವ ಪರಿಣಾಮವೂ ಸಾಕಷ್ಟು ಗುಣಾತ್ಮಕವಾಗಿರುತ್ತದೆ.



ಕ್ಯಾನ್ಸರ್‌ನಿಂದ ಸಾವು ಸಂಭವಿಸುವ ಒಟ್ಟು ಪ್ರಕರಣಗಳಲ್ಲಿ ಶೇಕಡಾ 50ರಷ್ಟು ಪ್ರಕರಣಗಳು ಪುರುಷರಲ್ಲಿ ಬಾಯಿ ಮತ್ತು ಶ್ವಾಸಕೋಶದ ಕ್ಯಾನ್ಸರ್‌ನಿಂದ ಸಂಭವಿಸಿದ್ದರೆ, ಮಹಿಳೆಯರಲ್ಲಿ ಸರ್ವಿಕಲ್ ಮತ್ತು ಸ್ತನದ ಕ್ಯಾನ್ಸರ್ ನಿಂದ ಸಂಭವಿಸಿದೆ. ಹಾಲಿವುಡ್‌ನ ಪ್ರಖ್ಯಾತ ನಟಿ ಏಂಜೆಲಿನಾ ಜೋಲಿ ಸ್ತನದ ಕ್ಯಾನ್ಸರ್ ವಿರುದ್ಧ ಬಹುದೊಡ್ಡ ಹೋರಾಟ ನಡೆಸಿರುವುದು ಹಳೆಯ ಸುದ್ದಿ. ಜೀವಕೋಶಗಳಲ್ಲಿ ಕ್ಯಾನ್ಸರ್ ಸಾಧ್ಯತೆಯನ್ನು ಸೂಚಿಸುವ ಬದಲಾವಣೆಯ ಹಿನ್ನೆಲೆಯಲ್ಲಿ ಆಕೆ ಮುನ್ನೆಚ್ಚರಿಕಾ ಕ್ರಮವಾಗಿ ಎರಡೂ ಸ್ತನಗಳ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈಗ ಬಾಲಿವುಡ್‌ನ ಸೊನಾಲಿ ಕೂಡಾ ಕ್ಯಾನ್ಸರ್ ವಿರುದ್ಧ ಇಂತಹದ್ದೇ ಹೋರಾಟದ ಹಾದಿಯಲ್ಲಿದ್ದಾರೆ.

ಸೊನಾಲಿಯ ದೇಹದಲ್ಲಿ ಪತ್ತೆಯಾಗಿರುವುದು ಮೆಟಸ್ಟಾಟಿಕ್ ಕ್ಯಾನ್ಸರ್. ಅಸಹಜ ಜೀವಕೋಶಗಳ ಗುಂಪು ನಿಯಂತ್ರಣವಿಲ್ಲದೆ ಬೆಳೆಯುವುದು. ಇದು ಆರಂಭವಾದ ದೇಹದ ಭಾಗದಲ್ಲೇ ಇರದೆ, ವಿವಿಧ ಭಾಗಗಳಿಗೆ ಪಸರಿಸುತ್ತದೆ. ಸೊನಾಲಿ ಬಹುತೇಕ ಈ ಕ್ಯಾನ್ಸರ್‌ನ ನಾಲ್ಕನೇ ಹಂತದಲ್ಲಿದ್ದಾಳೆ ಎನ್ನುತ್ತಿದೆ ವೈದ್ಯರ ತಂಡ. ಈ ರೀತಿಯ ಮೆಟಸ್ಟಾಟಿಕ್ ಕ್ಯಾನ್ಸರ್‌ಗಳಲ್ಲಿ ಬಹುತೇಕ ಅದು ದೇಹದ ಯಾವ ಭಾಗದಿಂದ ಆರಂಭವಾಯಿತು ಎಂದು ಪತ್ತೆ ಹಚ್ಚಬಹುದು. ಕೆಲವು ಪ್ರಕರಣಗಳಲ್ಲಿ ಅದು ಗುಣವಾಗಬಹುದು. ಆದರೆ ಬಹುತೇಕ ಪ್ರಕರಣಗಳಲ್ಲಿ ಅದು ಗುಣವಾಗುವುದಿಲ್ಲ. ಆದರೆ ಹರಡುವುದನ್ನು ನಿಯಂತ್ರಿಸಬಹುದು. ಮೆಟಸ್ಟಾಟಿಕ್ ಕ್ಯಾನ್ಸರ್ ಪತ್ತೆಯಾದ ರೋಗಿಯು ಈ ಕ್ಯಾನ್ಸರ್ ಜತೆಗೆ ಕೆಲವು ತಿಂಗಳ ಕಾಲ ಅಥವಾ ಕೆಲವು ವರ್ಷಗಳ ಕಾಲವೂ ಬದುಕಬಹುದು.

43ರ ಹರೆಯದ ಸೊನಾಲಿ, (ಬರ್ತ್‌ಡೇ: ಜನವರಿ 1, 1975) ಈಗಲೂ ತನ್ನ ಅನುಪಮ ದೈಹಿಕ ಚೆಲುವನ್ನು ಹಾಗೆಯೇ ಉಳಿಸಿಕೊಂಡಾಕೆ. ಚಿತ್ರನಟಿ ಆಗುವುದಕ್ಕೆ ಮುಂಚೆ ಮಾಡೆಲಿಂಗ್‌ನಲ್ಲಿ ಮಿಂಚಿದಾಕೆ. ಸ್ಟಾರ್‌ಡಸ್ಟ್‌ನ ಟ್ಯಾಲೆಂಟ್ ಸರ್ಚ್ ಸ್ಪರ್ಧೆಯಲ್ಲಿ ಗೆದ್ದು ಬಾಲಿವುಡ್‌ನ ಗಮನ ಸೆಳೆದಾಕೆ. ಆಕೆ ನಟಿಸಿದ ಮೊದಲ ಹಿಂದಿ ಚಿತ್ರ 1994ರಲ್ಲಿ ತೆರೆ ಕಂಡ 'ಆಗ್'. ಗೋವಿಂದ ನಾಯಕನಾಗಿದ್ದ ಆ ಸಿನಿಮಾ ಕಲೆಕ್ಷನ್‌ನಲ್ಲಿ ಇನ್ನಿಲ್ಲದಂತೆ ನೆಲ ಕಚ್ಚಿತ್ತು. ಆದರೆ ಚಿತ್ರದ ಹೀರೋಯಿನ್‌ನತ್ತ ಬಾಲಿವುಡ್‌ನ ಕುತೂಹಲದಿಂದ ತಿರುಗಿ ನೋಡಿತು.

ಮುಂಬೈಯಲ್ಲಿ ಜನಿಸಿದ ಸೊನಾಲಿ, ಬೆಂಗಳೂರಿನ ಮಲ್ಲೇಶ್ವರಂ ಕೇಂದ್ರೀಯ ವಿದ್ಯಾಲಯದಲ್ಲಿ ಬಾಲ್ಯದ ವಿದ್ಯಾಭ್ಯಾಸ ಪಡೆದವಳು. ಬಳಿಕ ಥಾಣೆಯ ಹೋಲಿ ಕ್ರಾಸ್ ಕಾನ್ವೆಂಟ್‌ನಲ್ಲಿ ಶಿಕ್ಷಣ ಮುಂದುವರಿಸಿದಳು. ಹಾಗಾಗಿಯೇ ಹಿಂದಿಯಲ್ಲಿ ಹೆಸರು ಮಾಡಿದ ಬಳಿಕವೂ, ಕನ್ನಡದ 'ಪ್ರೀತ್ಸೆ ಪ್ರೀತ್ಸೆ' ಎನ್ನುವ ಚಿತ್ರಕ್ಕೆ ಹೀರೋಯಿನ್ ಆಗಿ ನಿರ್ದೇಶಕ ಡಿ.ರಾಜೇಂದ್ರ ಸಿಂಗ್ ಬಾಬು ಸಂಪರ್ಕಿಸಿದಾಗ ಆಕೆ ಇಲ್ಲವೆನ್ನಲಿಲ್ಲ. ಹಿಂದಿ ಚಿತ್ರದ ರಿಮೇಕ್ ಆದರೂ, ಆ ಸಿನಿಮಾ ಬಾಕ್ಸಾಫೀಸ್ ನಲ್ಲಿ ಅತ್ಯಧಿಕ ಕಲೆಕ್ಷನ್ ಸಾಧಿಸಿತು. 2002ರಲ್ಲಿ ಚಿತ್ರ ನಿರ್ದೇಶಕ ಗೋಲ್ಡಿ ಬೆಹ್ಲ್ ಅವರನ್ನು ಮದುವೆಯಾದ ಸೊನಾಲಿಗೆ ಈಗ 13ರ ಹರೆಯದ ಮಗ (ರಣ್‌ವೀರ್) ಇದ್ದಾನೆ.

ದಿಲ್‌ಜಲೆ, ಸರ್ಫರೋಸ್, ಜಖ್ಮ್, ಡುಪ್ಲಿಕೇಟ್, ಹಮ್ ಸಾಥ್ ಸಾಥ್ ಹೈ ಮುಂತಾಗಿ ಹಲವು ಯಶಸ್ವಿ ಚಿತ್ರಗಳಲ್ಲಿ ನಾಯಕಿಯಾಗಿದ್ದ ಸೊನಾಲಿ, ಬಾಲಿವುಡ್‌ನ ಸಲ್ಮಾನ್, ಅಮೀರ್, ಶಾರೂಕ್ ಮತ್ತು ಸೈಫ್ ಎಂಬ ನಾಲ್ಕೂ ಖಾನ್‌ಗಳ ಜತೆ ನಟಿಸಿ ದಾಖಲೆ ಬರೆದಾಕೆ. ಅಲ್ಲದೆ ಅಕ್ಷಯ್ ಕುಮಾರ್, ಸುನಿಲ್ ಶೆಟ್ಟಿ, ಅಜಯ್ ದೇವಗನ್ ಮತ್ತು ತೆಲುಗಿನ ಚಿರಂಜೀವಿ ಅವರ ಜತೆಗೂ ನಾಯಕಿ ಆಗಿದ್ದಾಕೆ. ಟಿವಿಯಲ್ಲಿ ಆ್ಯಂಕರ್ ಮತ್ತು ಡ್ಯಾನ್ಸ್ ಶೋ ಜಡ್ಜ್ ಆಗಿಯೂ ಜನಪ್ರಿಯತೆ ಪಡೆದಾಕೆ. ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಆಕೆ ಜಯ ಗಳಿಸಿ ಮರಳಲಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65